# <u>ಹಿರಿಯ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶೋರಾಪುರ.</u>

## <u>ಅಪರಾಧಿಕ ಪ್ರಕರಣ ಸಂಖ್ಯೆಃ 218/2019</u>

ಫಿರ್ಯಾದಿದಾರರುಃ ಸರ್ಕಾರದ ಪರ ಕೆಂಭಾವಿ ಪೊಲೀಸ್ ಠಾಣೆ.

**:: ವಿರುದ್ಧ ::**

ಆರೋಪಿತರುಃ

1. ಗುರುನಾಥರೆಡ್ಡಿ ತಂದೆ ಬಸವಂತ್ರಾಯ ಹೊಸಗೌಡರ,
   ವಯಸ್ಸುಃ 55 ವರ್ಷ, ಉಃ ಒಕ್ಕಲುತನ,
   ಸಾಃ ನಗನೂರ.
2. ಬಸನಗೌಡ ತಂದೆ ಮಡಿವಾಳಪ್ಪಗೌಡ ಹಿರೆಗೌಡ,
   ವಯಸ್ಸುಃ 38 ವರ್ಷ, ಉಃ ಒಕ್ಕಲುತನ,
   ಸಾಃ ಏವೂರ.

**:: ದೋಷಾರೋಪಣೆ ::**

ನಾನು ಶ್ರೀಮತಿ ತಯ್ಯಾಬಾ ಸುಲ್ತಾನಾ, ಹಿರಿಯ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶೋರಾಪೂರ ಆರೋಪಿತರಾದ ನಿಮಗೆ ಈ ಕೆಳಗಿನ ರೀತಿ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕ 26-01-2014 ರಂದು 8-15 ಪಿ.ಎಮ್‌ಕ್ಕೆ ಕೆಂಭಾವಿ ಪೊಲೀಸ ಠಾಣಾ ಹದ್ದಿಯ ಪೈಕಿ ಏವೂರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶಾಖೆಯು ನಗನೂರ ಗ್ರಾಮದಲ್ಲಿ ಇದ್ದು 2011 ನೇಯ ಸಾಲಿನಲ್ಲಿ ಸಂಘದ ಶಾಖೆಯಲ್ಲಿ 1 ನೇ ಆರೋಪಿ ಕಾರ್ಯದರ್ಶಿಯಾಗಿದ್ದು, 2 ನೇ ಆರೋಪಿ ಅಧ್ಯಕ್ಷರಾಗಿದ್ದು 2011 ನೇಯ ಸಾಲಿನಲ್ಲಿ ಏವೂರ ಗ್ರಾಮದ ರೈತರು ಸಾಲಗಾರರೇತ ಬೆಳೆಗೆ ವಿಮೆಯನ್ನು ಮಾಡಿಸಿದ್ದರಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಸಾಲಗಾರರೇತ ರೈತರಿಂದ ಜೋಳ ಮತ್ತು ಕಡಲೆ ಬೆಳೆ ವಿಮೆಯನ್ನು ಮಾಡಿದ್ದು ವಿಮೆಯ ಮಂಜೂರಾದ ಹಣ 2012 ನೇಯ ಸಾಲಿನಲ್ಲಿ 154 ರೈತರಿಗೆ ವಿಮೆ ಕಂಪನಿಯಿಂದ ಒಟ್ಟು ಹಣ ರೂ.6,72,818.82/- ಮಂಜೂರಾಗಿ ಬಂದಿದ್ದು ಆರೋಪಿತರಾದ ನೀವು ವಿಮೆಯ ಹಣವನ್ನು ಮಂಜುರಾಗಿ ಬಂದ ಬಗ್ಗೆ ರೈತರಿಗೆ ಮಾಹಿತಿಯನ್ನು ನೀಡದೇ ಸುಮಾರು 7 ತಿಂಗಳ ಮೇಲ್ಪಟ್ಟು ಸದರಿ ಹಣವನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ರೈತರ ಬೆಳೆವಿಮೆಯ ಹಣವನ್ನು ದುರ್ಬಳಕೆ ಮಾಡಿಕೊಂಡು ವಂಚಿಸಿ ಅವ್ಯವಹಾರ ಮಾಡಿ ಭಾ.ದಂ.ಸಂ.ಕಲಂ.409 ಹಾಗೂ ಸಹವಾಚಕ ಕಲಂ.34 ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಪ್ರ ಃ ನಿಮಗೆ ಮೇಲಿನ ಹೇಳಿಕೆಯನ್ನು ಓದಿ ತಿಳಿಸಿ ಹೇಳಿದ್ದು ನಿಮಗೆ ತಿಳಿಯತೆ?

ಉತ್ತರ ಃ ಆರೋಪಿ ನಂ. 1

ಆರೋಪಿ ನಂ. 2

ಪ್ರ ಃ ನೀವು ಮೇಲಿನ ಹೇಳಿಕೆಯನ್ನು ಓಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ ಃ ಆರೋಪಿ ನಂ. 1

ಆರೋಪಿ ನಂ. 2

(ಮೇಲಿನ ಹೇಳಿಕೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ತಿಳಿಸಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ಅವರ ಉತ್ತರುಗಳನ್ನು ಬರೆಯಲಾಯಿತು ಎಂದು ಧೃಡಿಕರಿಸಿದೆ).

ದಿನಾಂಕ ಃ 17.12.2019.

(ತಯ್ಯಬಾ ಸುಲ್ತಾನಾ)
ಹಿರಿಯ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ಶೋರಾಪುರ.